ಡಾಕ್ಟರು ತಿಂಗಳಿಗೊಮ್ಮೆ ಬಂದು ತೋರಿಸಿ ಅಂತ ಹೇಳಿದ್ದರೂ ತಾನು ಮತ್ತೆ ಹೋಗುವ ಯೋಚನೆಯನ್ನೆ ಮಾಡಲಿಲ್ಲವೇನೋ ಅನ್ನುವುದು ಚುಚ್ಚಿದಂತಾಗಿ ಪಕ್ಕಕ್ಕೆ ನೋಡಿದ. ಈಶ್ವರ ಆ ಕಡೆ ಮುಖಮಾಡಿ ನಿದ್ದೆಯಲ್ಲಿದ್ದ. ನಿಂದಿನ್ನೂ ಚಿಕ್ಕ ಪ್ರಾಯ, ಮಿದುಳಲ್ಲಿ ಹೀಗಾಗಿದ್ದಕ್ಕೆ ಅಣ್ಣನಿಗೆ ಇನ್ನೂ ಯಾವ್ಯಾವ ಶಕ್ತಿ ಊನ ಆಗಲಿಕ್ಕಿದೆಯೋ ಅಂತ ಪದೇಪದೇ ಅತ್ತಿಗೆಯ ತಲೆಗೆ ಒರೆಸಿದ್ದು ಇದೇ ಸುಶೀಲ. ಎಸ್ಸೆಸ್ಸೆಲ್ಸಿ ಮಾಡಿದ ಮಂಥರೆ ಅವಳು! ಸಹಜವಾಗಿ ಅತ್ತಿಗೆಯ ಅಪ್ಪ ಮಗಳಿಗೆ ಮತ್ತೊಂದು ಮದುವೆ ಮಾಡುವುದಕ್ಕೆ ಪರವಾಗಿದ್ದ. ಅಂತಹ ಮನಃಸ್ಥಿತಿಯಲ್ಲಿರುವಾಗಲೇ ಹೊನ್ನಾವರದ ವಕೀಲರನ್ನು ಹಿಡಿದು ವಿಚ್ಛೇದನಕ್ಕೆ ಅರ್ಜಿ ಹಾಕಿಸಿ, ಬೇಕಾದ ಪುರಾವೆ ಕಾಗದಪತ್ರಗಳನ್ನ ತಯಾರಿಸಿ ತಮ್ಮೆಲ್ಲರ ಪರಿಪೂರ್ಣ ಸಹಕಾರದಲ್ಲಿ ಒಂದು ವರ್ಷಕ್ಕೆ ಬಿಡುಗಡೆಯಾಗಿತ್ತು. ನಿನ್ನ ಚಿನ್ನ, ಬೆಳ್ಳಿ ಎಲ್ಲ ನೀನೆ ಇಟ್ಟುಕೊ ಅಂತ ಅವಳಿಗೆ ದೊಡ್ಡ ಉಪಕಾರ ಮಾಡುವವರಂತೆ ತಾವು ಪೋಸು ಕೊಟ್ಟು, ತಿಂಗಳೊಳಗೆ ಅವಳಪ್ಪ ಕುಮಟೆಯ ತಾಲ್ಲೂಕು ಕಚೇರಿಯ ಕ್ಲರ್ಕ್‌ನ ಎರಡನೇ ಸಂಬಂಧಕ್ಕೆ ಅವಳ ಮದುವೆ ಮಾಡಿದ್ದ. ಅಣ್ಣನ ಆಸ್ತಿಯನ್ನು ತಾವು ಸುರಕ್ಷಿತ ಮಾಡಿಕೊಂಡಾಗಿತ್ತು. ಇಲ್ಲಿಯವರೆಗೆ ಸಹಕಾರ ಕೊಟ್ಟ ಮೂರೂಜನ ಆಮೇಲೆ ಶಾಣೆತನ ತೋರಿಸುತ್ತಾರೆ ಅಂತ ತಾನಂದುಕೊಂಡಿರಲಿಲ್ಲ. 'ಅವ ಶಕುನಿಯಂತಾವ. ಈಗ ನಮ್ಮ ಬಿಗೀಲಿ ನಾವಿರಬೇಕು...' ಅಂತ ಶ್ಯಾಮಲ ಉಳಿದವರಿಗೆ ಕಿವಿಮಾತು ಹೇಳಿದ್ದ ಗಾಳಿ ಸುದ್ದಿ ತನಗೆ ತಲುಪಿತ್ತು. ಬಳಸಿದ ಕಾಗದಪತ್ರ ಇವರ ಪೈಕಿ ಯಾರ ಹತ್ತಿರವಿದೆ ಅಂತ ತನಗೂ ನಿಗೂಢ.

ಬಸ್ಸು ಹೊನ್ನಾವರ ಸೇರಿದಾಗ ಇನ್ನೂ ಚುಮುಚುಮು ನಸುಕು. ಬಸ್ ನಿಲ್ದಾಣದಲ್ಲಿ ಪ್ಲೇಟ್ ಇಡ್ಲಿ ಚಹಾ ಮುಗಿಸಿ ತಾರೀಬಾಗಿಲಿಗೆ ಬಂದರು. ಲಕಲಕ ಶಬ್ದದೊಂದಿಗೆ ದಂಡೆಗೆ ಬಡಿಯುವ ಶರಾವತಿಯ ನೀರನ್ನು ನೋಡಿ ಈಶ್ವರ ಪರವಶನಾದ. ತುದಿಗಾಲಲ್ಲಿ ಕುಳಿತು ಅಂಗೈಯನ್ನು ನೀರಲ್ಲಾಡಿಸಿದವ ಎತ್ತಿ ಮುಖಕ್ಕೆಲ್ಲ ಸವರಿಕೊಂಡ. ಬಾಲ್ಯದಿಂದಲು ಅನುಭವಕ್ಕೆ ದಕ್ಕಿ ಕಣಕಣದಲ್ಲಿ ಕಲಸಿಕೊಂಡ ಅಲ್ಲಿಯ ದೃಶ್ಯಗಳನ್ನು ಹೀರಿಕೊಳ್ಳುವಂತೆ ಸುತ್ತಮುತ್ತ ಕಣ್ಣಾಡಿಸತೊಡಗಿದ. 'ಡಿಂಗಿ ಬಂತು...' ಅಂತ ಕೇಶವ ಅವಸರಿಸಿದ. ಅದರಲ್ಲಿ ಕುಳಿತು ನೀರ ಮಡಿಲಲ್ಲಿ ತುಯ್ಯುವ ಲಯದಲ್ಲಿ ವರ್ತಮಾನ ಕರಗಿ ನೊರೆಯಾಗುತ್ತಿತ್ತು. ಈಶ್ವರ ಹನ್ನೆರಡನೆ ವಯಸಲ್ಲೆ ಅದನ್ನು ಸಾಧಿಸಿದ್ದ. ಹತ್ತಾರು ಕುಟುಂಬಗಳು ಅದನ್ನೆ ಮಾಡುತ್ತಿದ್ದರೂ ಪತ್ತಾರ ಕುಟುಂಬ ನೈಪುಣ್ಯ ಸಾಧಿಸಿತ್ತು. ಪತ್ತಾರ ಅಂದರೆ ಬಂಗಾರದ ಕೆಲಸದವರು. ಅದು ಹೇಗೋ ಕಬ್ಬಿಣದ ಬೀಗ ತಯಾರಿಸುವ ಉದ್ಯಮಕ್ಕೆ ಬಂದು ಬಂಗಾರದಲ್ಲಿ ತೋರಿಸುವ ಕೌಶಲ್ಯವನ್ನು ಇಲ್ಲಿ ಸಾಧಿಸಿದ್ದರು. 'ಮಾವಿನಕುರ್ವೆ ಬೀಗ' ಅನ್ನುವ ಹೆಸರೆ ಅದರ ಗಟ್ಟಿತನಕ್ಕೂ ಬೀಗ ಹಾಕಿದ ಬಾಗಿಲಿನ ಸುರಕ್ಷತೆಗೂ ಒಂದು ಪ್ರತೀಕವಾಗಿತ್ತು. ಅವನ ಹತ್ತಿರ ಗುಟ್ಟು ಬಿಡಿಸೋದ, ಅವ ಮಾವಿನಕುರ್ವೆ ಬೀಗ ಅನ್ನುವ ಮಟ್ಟದಲ್ಲಿ ಒಂದು ರೂಪಕವಾಗಿಹೋಗಿತ್ತು! ದೇಶದುದ್ದಕ್ಕೂ ಅದರ ಖ್ಯಾತಿ. ಬೀಗಗಳ ಆಕಾರ ಕೀಲಿ ಬಳಸುವಲ್ಲಿನ ವೈವಿಧ್ಯತೆ ಎಲ್ಲದರಲ್ಲಿ ವೈಶಿಷ್ಟ್ಯ ಪಡೆದ ಅವುಗಳಿಗೆ ಅಪಾರ ಬೇಡಿಕೆಯಿತ್ತು. ಕಬ್ಬಿಣದ ಹಾಳೆಗಳನ್ನು ಬೇಕಾದ ವಿನ್ಯಾಸದಲ್ಲಿ ಕತ್ತರಿಸಿಕೊಂಡು, ನಕ್ಷೆಗೆ ಬೇಕಾದಂತೆ ತೂತು ಕೊರೆದು, ಮೊಳೆಗಳನ್ನು ಕೂಡಿಸಿ, ನಡುವೆ ಕೊಕ್ಕೆ, ಬಿಲ್ಲುಗಳನ್ನು ಬಾಗಿಸಿ ಜೋಡಿಸಿ, ಮೇಲುಹಾಳೆ ಪಕ್ಕದ ಹಾಳೆ ಜೋಡಿಸಿ, ಬೆಸೆದು... ಹೀಗೆ ನಾಜೂಕಾದ ಏಕಾಗ್ರತೆ ಬೇಡುವ ಕೆಲಸ. ಕೈಯಿಂದಲೆ ಮಾಡುವ ಕೆಲಸ. ಕ್ರಮೇಣ ಬೆಲೆ ಜಾಸ್ತಿಯಾಗುತ್ತ ಹೋಗಿದ್ದು ಅನಿವಾರ್ಯವಾಗಿತ್ತು. ಆದರೂ ಬೇಡಿಕೆಯಿತ್ತು. ಮಾವಿನಕುರ್ವೆಯಾಚೆ ಹೊನ್ನಾವರ ಕುಮಟಾದವರೆಗೂ ತಮ್ಮನ್ನು ಕಂಡರೆ ಗುರುತು ಹಿಡಿಯದವರಿಲ್ಲ.

ಡಿಂಗಿ ನೆಲಕ್ಕೆ ಹತ್ತಿರವಾಯಿತು. ತೆಂಗು ಬಾಳೆ ಹಲಸು ಮುಂತಾದ ಗಿಡಗಳಿಂದ ಹಸಿರಾಗಿ ತುಂಬಿ ನಿಂತಿರುವ ನೆಲ ಕೈಯಳತೆಗೆ ಬಂತು. ದಡಕ್ಕೆ ಸೇರಿದ ಈಶ್ವರ ಹಳೆಯ ನೆಲದ ನೆನಪನ್ನೆಲ್ಲ ಹೀರಿಕೊಳ್ಳುವವನಂತೆ ನೀಳವಾಗಿ ಉಸಿರೆಳೆದುಕೊಂಡ. ಕೇಶವನಿಗೆ ನಿರುತ್ಸಾಹಕ್ಕಿಂತ ಮಿಗಿಲಾಗಿ ಒಂದು ದುಗುಡ ಆವರಿಸಿದಂತಿತ್ತು. ಅದನ್ನೆಲ್ಲ ಲಕ್ಷಿಸದ